# ಮುಟ್ಟೆಂಬ ಜೀವಶಕ್ತಿ

ಸತಿ ಭಕ್ತಿಯಾದೊಡೆ ಹೊಲೆಗಂಜಲಾಗದು
ಪತಿ ಭಕ್ತನಾದೊಡೆ ಕುಲಕ್ಕಂಜಲಾಗದು
ಸತಿ ಪತಿಯೆಂಬ ಅಂಗಸುಖ ಹಿಂಗಿ, ಲಿಂಗವೇ ಪತಿಯಾದ ಬಳಿಕ
ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ?
ಹಾಲುಂಡು ಮೇಲುಂಬರೆ ಗುಹೇಶ್ವರಾ?

ಅಲ್ಲಮಪ್ರಭುವಿನ ಈ ವಚನ ಶರಣ ಸಿದ್ಧಾಂತದ ಶರಣಸತಿ–ಲಿಂಗಪತಿ ತತ್ವವನ್ನು ವಿಶದೀಕರಿಸುತ್ತದೆ. ವಚನದ ಪೂರ್ತಿ ಅರ್ಥ ವ್ಯಾಖ್ಯಾನ ಇಲ್ಲಿ ಅನವಶ್ಯಕ. ಅದರ ಮೊದಲ ಸಾಲು ಮಾತ್ರ ಈಗ ಪ್ರಸ್ತುತ. ಸತಿ ಅಂದರೆ ಹೆಂಡತಿ ಎಂಬುದರೊಂದಿಗೆ ರಜಸ್ವಲೆಯಾಗುವ ಮಹಿಳೆ ಎಂದೇ ಅರ್ಥ. ಹೊಲೆ ಎಂಬುದು ಜಾತಿವಾಚಕವಲ್ಲ. ಅಸಲಿಗೆ ಅದು ಗುಣವಾಚಕ ಶಬ್ದ. ಕಾಲಾನಂತರದಲ್ಲಿ ಅದು ವೃತ್ತಿವಾಚಕ, ಜಾತಿ ವಾಚಕವಾಗಿಯೂ ಬಳಕೆಯಾಗುತ್ತಿದೆ. ಹೊಲೆ ಎಂದರೆ ಮುಟ್ಟು, ರಜಸ್ವಲೆ, ಮಹಿಳೆಯರ ಮಾಸಿಕ ಸ್ರಾವ. ಕರ್ನಾಟಕ ಸರಕಾರವು ಮುಟ್ಟಿನ ರಜೆ ಘೋಷಿಸಿದ್ದರಿಂದ ಪರ ವಿರೋಧ ಚರ್ಚೆಗಳು ಜೋರಾಗಿಯೇ ನಡೆದಿವೆ.

ಗರ್ಭಾಶಯ ಹೆಣ್ಣಿನ ಶಕ್ತಿ ಕೇಂದ್ರ. ಮುಟ್ಟು ಅದರ ಸಚೇತನ ವ್ಯಕ್ತರೂಪ. ಮುಟ್ಟು ಜಮೆಗೊಂಡು ರೂಹು ತಳೆದ ಶರೀರದ ವಿಕ್ರಮ ವರ್ಣಿಸಲಸದಳ. ಇಂಥ ಮುಟ್ಟನ್ನು ಮೈಲಿಗೆ, ಹೇಸಿಗೆ ಎಂದು ಜರೆದ ಸಂಸ್ಕೃತಿಯೂ ನಮ್ಮದೆ. ಮುಟ್ಟು ಕಾರಣವಾಗಿಯೇ ಹೆಣ್ಣನ್ನು ಬಹಿಷ್ಠೆ, ಅಬಲೆ, ಬಹಿಷ್ಕೃತೆ, ಅಸ್ಪೃಶ್ಯೆ ಎಂದು ವ್ಯಾಖ್ಯಾನಿಸಿ ಅವಳನ್ನು ದೂರ ಕೂಡಿಸಿ ಮೇಲಿನಿಂದ ಎತ್ತಿ ಅನ್ನ ನೀರು ನೀಡುವ ಪೃಥೆಯೊಂದು ಅಲ್ಲಲ್ಲಿ ಇನ್ನೂ ಮುಂದುವರಿದುಕೊಂಡು ಬರುತ್ತಿದೆ ಎಂದರೆ ಯಾರೂ ಅಲ್ಲಗಳೆಯಬೇಕಿಲ್ಲ. ಮುಟ್ಟಾದ ಅವಧಿಯಲ್ಲಿ ಆಕೆಯನ್ನು ಮುಟ್ಟಿಸಿಕೊಳ್ಳಬಾರದೆಂಬ ಅವೈಜ್ಞಾನಿಕ, ಅಮಾನವೀಯ ಮೂರ್ಖಾಚರಣೆಗಳನ್ನು ಅಲ್ಲಮಾದಿಗಳು ಅಂದೇ ಖಂಡಿಸಿದ್ದಾರೆ. ಮಾಸಿಕ ಸ್ರಾವ ಮೈಲಿಗೆ ಎಂಬುದು ಸನಾತನಿಗಳ ವ್ಯಾಧಿ. ಶಿವಭಕ್ತರಲ್ಲಿ ಅಂಥ ಅಂಧಾನುಕರಣೆಗಳಿಲ್ಲ. ವೈದಿಕರು ಮುಟ್ಟನ್ನು ಮೈಲಿಗೆ ಎಂದು ಜರೆದರಷ್ಟೇ ಅಲ್ಲ, ಮುಟ್ಟಾದ ಮಹಿಳೆಯರು ದೇವರ ಪೂಜೆ ಮಾಡಬಾರದು, ಮನೆಯ ಒಳಗೆ ಸುಳಿದಾಡಬಾರದು, ಹಸುಮಕ್ಕಳನ್ನು ಮುಟ್ಟಬಾರದು, ಮಂಗಳ ಕಾರ್ಯಗಳಲ್ಲಿ ಭಾಗವಹಿಸಬಾರದು, ಗುಡಿ–ಗುಂಡಾರಗಳಿಗೆ ಹೋಗಬಾರದು ಎಂದೆಲ್ಲ ಹೆದರಿಸಿದ್ದರು. ಹೀಗೆ ಮಾಡಿದರೆ ಏನೋ ಅನಿಷ್ಟವಾಗುತ್ತದೆ ಎಂಬ ಭಯವನ್ನು ಬಿತ್ತಿ ಬೆಳೆಯಲಾಗಿತ್ತು. ಖುದ್ದು ಮಹಿಳೆಯರೆ ಮುಟ್ಟಿನ ಭೀತಿಗೆ ಒಳಗಾಗಿ ದೇವಸ್ಥಾನದೊಳಗಡೆ ಹೆಜ್ಜೆ ಇಡದಿರುವುದನ್ನು ಇಂದಿಗೂ ನೋಡುತ್ತಿದ್ದೇವೆ. ಆದ್ದರಿಂದಲೆ ಅಲ್ಲಮ;

'ಮುಟ್ಟಿಗೆ ಅಂಜಬಾರದು, ಅದು ಅಪಶಕುನವಲ್ಲ. ಮೈಲಿಗೆ ಮೊದಲೇ ಅಲ್ಲ' ಎಂದರೆ, ಕಡಕೋಳ ಮಡಿವಾಳಪ್ಪನು

ಮುಡಚಟ್ಟಿನೊಳು ಬಂದು ಮುಟ್ಟಿ ತಟ್ಟಿ ಅಂತೀರಿ
ಮುಡಚಟ್ಟ ಯಾವಲ್ಯಾದ್ಹೇಳಣ್ಣ
ಮುಟ್ಟಾದ ಮೂರು ದಿನಕ ಹುಟ್ಟಿ ಬಂದೀರಿ ನೀವು
ಎಂದು ಮೌಢ್ಯಾಚರಣೆ ಮಾಡುವವರನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ.

ಇದೇ ಮಾತನ್ನೆ ಸರ್ವಜ್ಞ

'ಮುಟ್ಟು ಕಂಡವಳನ್ನು ಮುಟ್ಟಲೊಲ್ಲರು
ಮುಟ್ಟು ತಾ ತಡೆದು ಬಂದ ದೇಹವನು
ಮುಟ್ಟುತಿಹರೇಕೆ ಸರ್ವಜ್ಞ' ಎನ್ನುತ್ತಾನೆ. ಹೀಗೆ ಮುಟ್ಟನ್ನು ಅಪಸವ್ಯಗೊಳಿಸಿ ಅವಳ ಕರ್ತೃತ್ವ ಶಕ್ತಿಯನ್ನೆ ಮಣ್ಣುಗೂಡಿಸಿದ ಕಾಲಘಟ್ಟವನ್ನು ಹಾದು ಬಂದು ಇದೀಗ ಅದನ್ನು ಗೌರವಿಸಿ ಆರೈಕೆ ಮಾಡಿಸಿಕೊಳ್ಳುವ ಹಂತಕ್ಕೆ ಮಹಿಳೆಯರು ಬಂದು ತಲುಪಿದ್ದಾರೆ. ಈಗಲಾದರೂ ಮುಟ್ಟು ಬಹಿಷ್ಠ ಅನಿಷ್ಠವಲ್ಲ. ಅದು ಸ್ತ್ರೀಯರ ಅಸ್ಮಿತೆ ಎಂಬುದನ್ನು ಸಮಾಜ ಒಪ್ಪಿಕೊಂಡಿದೆ ಎಂಬುದೇ ಖುಷಿಯ ಸಂಗತಿ.

ಮುಟ್ಟು ಅಸಹಜವಲ್ಲ. ಅಂಗವೈಕಲ್ಯವಲ್ಲ. ದೌರ್ಬಲ್ಯವಲ್ಲ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅದು ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ವಿಶೇಷ ಶಾರೀರಿಕ ಸಂಚಲನ. ಮೈ ಮನಗಳೆರಡೂ ಒಂದಷ್ಟು ದಣಿವಿಕೆ, ಧಾವಂತಕ್ಕೊಳಗಾಗುವ ಕಾಲಘಟ್ಟ. ಅದೊಂದು ಸಹಜ ಪ್ರಕ್ರಿಯೆ. ಅದಕ್ಯಾಕೆ ವಿಶೇಷ ರಜೆ ಬೇಕು? ಎಂದು ಕೇಳುವ ಅಣ್ಣಂದಿರಿಗೆ ಹೆಚ್ಚು ಉತ್ತರಿಸಬೇಕಿಲ್ಲ. ಅವರೊಮ್ಮೆ ಹೆಣ್ಣಾಗಿ ಜನಿಸಿ ಪ್ರತಿ ತಿಂಗಳು ರಕ್ತನದಿಯಾಗಿ, ಕೆಲವೊಮ್ಮೆ ಲಘುವಾಗಿ, ಕೆಲವೊಬ್ಬರಿಗೆ ಮಾರಣಾಂತಿಕ ಹೊಟ್ಟೆ ನುಲಿಕೆಯಾಗಿ, ಕೆಲವೊಮ್ಮೆ ವಿಪರೀತ ರಕ್ತ ಹೋಗಿ ಬಿಳಿಚಿಕೊಂಡು ಅಪ್ಪಚ್ಚಿಯಾಗಿ ಅನುಭವಿಸಿ ನೋಡಬಹುದೇ? ಎಂದು ಕೇಳಿದರೆ ಸಾಕೆಂದು ತೋರುತ್ತದೆ. ಪುರುಷ ಪ್ರಧಾನ ನಂಬಿಕೆಗಳನ್ನೆ ಹಾಸುಂಡು ಬದುಕುತ್ತಿರುವ ಕೆಲವು ಮಹಿಳೆಯರು ಅಯ್ಯೋ ಬಿಡಿ, ಇದಕ್ಕೇಕೆ ರಜೆ ಕೊಡಬೇಕು? ಸೋಮಾರಿಗಳಾಗಲು ಇದೊಂದು ನೆವನ ಆಯ್ತು ಎಂದವರು ಇಲ್ಲದಿಲ್ಲ. ಅಂಥವರಿಗೆ ಮಹಿಳೆಯರು ತಿಂಗಳೊಪ್ಪತ್ತಿನಲ್ಲಿ ಮಾಡುವ ಸರಾಸರಿ ಕೆಲಸದ ಪ್ರಮಾಣ, ಗುಣಮಟ್ಟಗಳ ಪರಿಚಯವಿದೆಯಾ? ಕೇಳಬೇಕಷ್ಟೆ. ಇನ್ನೂ ಹಾಗಾದರೆ ಹಿಂದಿನ ಕಾಲದಲ್ಲಿ ಮುಟ್ಟಾದವಳನ್ನು ದೂರ ಕೂಡಿಸುತ್ತಿದ್ದರು. ಈಗಲೂ ರಜೆ ನೀಡಿ ಅದೇ ಆಯ್ತಲ್ಲ ಎಂದರೆ ಅದು ಹಾಗಲ್ಲ. ಅಂದು ದೂರವೇನೋ ಕೂಡಿಸುತ್ತಿದ್ದರು. ಆದರೆ ವಿಶ್ರಾಂತಿ ಖಂಡಿತ ಕೊಡುತ್ತಿರಲಿಲ್ಲ. ಆ ಅವಧಿಯಲ್ಲಿ ಬಟ್ಟೆ ತೊಳೆಯುವುದು, ಪಾತ್ರೆ ಬೆಳಗುವುದು, ಕಸಗುಡಿಸುವುದು, ದವಸ ಧಾನ್ಯಗಳ ಹಸನು ಮಾಡುವುದು ಮುಂತಾಗಿ ನಿಯಮಿತ ಕೆಲಸಕ್ಕಿಂತ ಭಾರವಾದ ಕೆಲಸ ನೀಡಿ ಮಹಿಳೆಯರನ್ನು ಹಣ್ಣುಗಾಯಿ ನೀರುಗಾಯಿ ಮಾಡುವುದಿತ್ತು. ಅಂದಿನ ದೂರ ಅಪಮಾನಿಸುವ ಕ್ರಮವಾಗಿದ್ದರೆ ಇಂದಿನ ಸರಕಾರಿ ರಜೆ ಮಹಿಳೆಯರ ಬಗೆಗಿನ ಕಾಳಜಿ, ಕಕ್ಕುಲಾತಿಯಾಗಿ ಒದಗಿ ಬರಲಿ. ಮುಟ್ಟಿನ ರಜೆ ಮಹಿಳೆಯರ ಹಕ್ಕು ಹೊರತು ದುರ್ದಾನವಲ್ಲ.

ಮುಟ್ಟಿನ ರಜೆ ಹಾಕಿದರೆ ಅಯ್ಯೋ ಎಲ್ಲರಿಗೂ ಡಂಗೂರ ಹೊಡೆಯುವುದು ಅದೇನು ಚಂದ? ಎಂಬ ಮಡಿವಂತರು ಇಲ್ಲದಿಲ್ಲ. ಮುಟ್ಟು ಮುಜುಗರದ ಸಂಗತಿ ಆಗಬೇಕಿಲ್ಲ. ಮುಚ್ಚಿಡಬೇಕಾದ ಅಪರಾಧವೂ ಅಲ್ಲ. ಅದೊಂದು ನಿಸರ್ಗದತ್ತ ಸಹಜ ನಡೆ. ಸ್ತ್ರೀ ಕುಲದ ಶಾರೀರಿಕ ಸಮೃದ್ಧಿ. ಮುಟ್ಟು ಎಲ್ಲ ಪಶು, ಪ್ರಾಣಿಗಳಲ್ಲಿಯೂ ಇದೆ. ಅದರ ಆಕಾರ, ಸ್ವರೂಪ, ನಿಯಮ, ಕ್ರಿಯೆ ಭಿನ್ನ ವಿಭಿನ್ನ ಇರಬಹುದು. ಇದರ ಬಗೆಗೆ ಸಹಜೀವಿಗಳಾದ ಗಂಡಸರಿಗೂ ತಿಳಿದಿರಬೇಕು. ಆ ಅವಧಿಯ ಮಹಿಳೆಯರ ನಾಜೂಕಿನ ಸ್ಥಿತಿಯ ಬಗೆಗೆ ಪುರುಷರೂ ಸಂವೇದನಾಶೀಲರಾಗಲು ಮುಟ್ಟಿನ ರಜೆ ಹೆದ್ದಾರಿ ಆಗಲಿ. ಅವಳ ಬಗೆಗೆ ಅವನಿಗೆ ಕಳಕಳಿ, ಗೌರವ, ಕಾಳಜಿ, ಮುತುವರ್ಜಿ ಮೂಡಲು ದೃಢ ಹೆಜ್ಜೆ ಇದಾಗಲಿ ಎಂದು ಆಶಿಸೋಣ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ನಿಮ್ಮಲ್ಲಿ ಅಹಂಕಾರವಿಲ್ಲದಿದ್ದರೆ ನೀವು ಯಾವ ಧರ್ಮ ಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪದವನ್ನು ಪಡೆಯಬಹುದು.
  —ಸ್ವಾಮಿ ವಿವೇಕಾನಂದ
- ಮನುಷ್ಯ ತನ್ನ ಕೆಲಸಗಳಲ್ಲಿ ಎಷ್ಟೇ ಮೈ ಮುರಿಯುವುದು ಶಕ್ಯವಾದರೂ ಸಮಾಜ ಜೀವಿಯಾದ ಆತನ ಬಾಳು ಸಮನಾದ ಸ್ನೇಹ, ಮಾನವೀ ಸಂಪರ್ಕಗಳಿಲ್ಲದೆ ಸೊಗಯಿಸಲಾರದು.
  —ಶಿವರಾಮ ಕಾರಂತ
- ಅಧಿಕಾರ ಸ್ಥಾನವು ದೋಷವಿಲ್ಲದವನಲ್ಲೂ ಸಂಶಯಪಡುವಂಥದ್ದು.
  —ಕೆಂಪು ನಾರಾಯಣ
- ಹಸಿದವರಿಗೆ ಊಟ ಕೊಡುವುದು ಉಪಕಾರವಲ್ಲ. ಅದು ಕರ್ತವ್ಯ, ಮಾನವೀಯತೆಯ ಶಾಸನವಿದು.
  —ಕೃಷ್ಣಮೂರ್ತಿ ಪುರಾಣಿಕ
- ಅನುಭವ ಅನ್ನುವುದು ಉತ್ತೀರ್ಣತೆ ಇಲ್ಲದ ಶಿಕ್ಷಣ.
  —ಅಣ್ಣಾದೊರೈ
- ಅಸೂಯೆ ಗೋರಿಯಷ್ಟು ಘೋರ.
  —ಬೈಬಲ್